Akashvani : Bangalore
National Bulletin In Kannada
18.01.2025 / 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
18.01.2025 / 7.35AM

**ಮುಖ್ಯಾಂಶಗಳು:**

1. ಈ ತಿಂಗಳ ೩೧ರಿಂದ ಸಂಸತ್ ಬಜೆಟ್ ಅಧಿವೇಶನ ಪ್ರಾರಂಭ; ಫೆಬ್ರವರಿ ೧ ರಂದು ಕೇಂದ್ರ ಬಜೆಟ್ ಮಂಡನೆ
2. ಕೇಂದ್ರಾಡಳಿತ ಪ್ರದೇಶಗಳ ೫೦ ಸಾವಿರಕ್ಕೂ ಹೆಚ್ಚು ಗ್ರಾಮಗಳ ಗ್ರಾಮಸ್ಥರಿಗೆ ಸ್ವಾಮಿತ್ವ ಯೋಜನೆಯಡಿ ೬೫ ಲಕ್ಷಕ್ಕೂ ಹೆಚ್ಚು ಆಸ್ತಿ ಹಕ್ಕು ಪತ್ರ ವಿತರಿಸಲಿರುವ ಪ್ರಧಾನಿ ನರೇಂದ್ರ ಮೋದಿ
3. ಕೇಂದ್ರ ಸಚಿವ ಪಿಯೂಷ್ ಗೋಯಲ್ ಇಂದಿನಿಂದ ಮೂರು ದಿನಗಳ ಕಾಲ ಬ್ರುಸೆಲ್‌ಗೆ ಭೇಟಿ; ಐರೋಪ್ಯ ಒಕ್ಕೂಟದೊಂದಿಗೆ ವ್ಯಾಪಾರ, ಹೂಡಿಕೆ ಸಂಬಂಧ ಚರ್ಚೆ
4. ಐಸಿಸಿ ೧೯ ವರ್ಷದೊಳಗಿನವರ ಮಹಿಳಾ ಟಿ-೨೦ ವಿಶ್ವಕಪ್; ಮಲೇಷ್ಯಾದಲ್ಲಿಂದು ಆರಂಭ

******

ಸಂಸತ್ತಿನ ಬಜೆಟ್ ಅಧಿವೇಶನ ಈ ತಿಂಗಳ ೩೧ ರಿಂದ ಪ್ರಾರಂಭವಾಗಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಜನವರಿ ೩೧ ರಂದು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಫೆಬ್ರವರಿ ೧ ರಂದು ಕೇಂದ್ರ ಬಜೆಟ್ ಮಂಡಿಸಲಾಗುವುದು. ಬಜೆಟ್ ಅಧಿವೇಶನದ ಮೊದಲ ಭಾಗವು ಜನವರಿ ೩೧ ರಿಂದ ಫೆಬ್ರವರಿ ೧೩, ೨೦೨೫ ರವರೆಗೆ ನಡೆಯಲಿದ್ದು, ಬಜೆಟ್ ಅಧಿವೇಶನದ ಎರಡನೇ ಹಂತವು ಮಾರ್ಚ್ ೧೦ ರಿಂದ ಏಪ್ರಿಲ್ ೪, ೨೦೨೫ ರವರೆಗೆ ನಡೆಯಲಿದೆ.

******

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಹತ್ತು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ ೫೦ ಸಾವಿರಕ್ಕೂ ಹೆಚ್ಚು ಗ್ರಾಮಗಳ ಗ್ರಾಮಸ್ಥರಿಗೆ ಸ್ವಾಮಿತ್ವ ಯೋಜನೆಯಡಿ ೬೫ ಲಕ್ಷಕ್ಕೂ ಹೆಚ್ಚು ಆಸ್ತಿ ಹಕ್ಕು ಪತ್ರಗಳನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ವಿತರಿಸಲಿದ್ದಾರೆ.

**ಈ ಕುರಿತು ಒಂದು ವರದಿ**

ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮೀಣ ಪ್ರದೇಶಗಳ ಭೂ ಸಮೀಕ್ಷೆ ಮತ್ತು ಮ್ಯಾಪಿಂಗ್ ಮಾಡಿ, ಗ್ರಾಮಸ್ಥರ ಕುಟುಂಬಗಳಿಗೆ 'ತಮ್ಮ ಆಸ್ತಿ ಹಕ್ಕಿನ ಪತ್ರ ನೀಡುವ ಕಾರ್ಯಕ್ರಮ ಸ್ವಾಮಿತ್ವ ಯೋಜನೆಯಾಗಿದೆ. ಈ ಮೂಲಕ ಗ್ರಾಮೀಣ ಭಾರತದ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದು ಆಸ್ತಿಗಳನ್ನು ಬಳಸಿ ಹಣಗಳಿಕೆ ಸುಗಮಗೊಳಿಸುವ, ಬ್ಯಾಂಕ್ ಸಾಲಗಳ ಮೂಲಕ ಸಾಂಸ್ಥಿಕ ಸಾಲ ಪಡೆಯಲು ಅನುವು ಮಾಡಿಕೊಡುವ ಆಸ್ತಿ-ಸಂಬಂಧಿತ ವಿವಾದಗಳನ್ನು ತಗ್ಗಿಸುವ ಜೊತೆಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ ಮೌಲ್ಯಮಾಪನಗಳು ಮತ್ತು ಆಸ್ತಿ ತೆರಿಗೆ ಸಂಗ್ರಹವನ್ನು ಬೆಂಬಲಿಸುತ್ತದೆ.

******

ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಐರೋಪ್ಯ ವ್ಯಾಪಾರ ಮತ್ತು ಆರ್ಥಿಕ ಭದ್ರತಾ ಆಯೋಗದ ಆಯುಕ್ತ ಮರೋಸ್ ಸೆಫ್ಕೋವಿಕ್ ಅವರೊಂದಿಗೆ ಉನ್ನತ ಮಟ್ಟದ ಸಂವಾದಕ್ಕಾಗಿ ಬ್ರುಸೆಲ್ಸ್‌ಗೆ ಭೇಟಿ ನೀಡಲಿದ್ದಾರೆ. ಇಂದಿನಿಂದ ಪ್ರಾರಂಭವಾಗುವ ಮೂರು ದಿನಗಳ ಭೇಟಿಯು ಐರೋಪ್ಯ ಒಕ್ಕೂಟದೊಂದಿಗೆ ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳಿಗೆ ಭಾರತದ ಬದ್ಧತೆಯನ್ನು ಪ್ರತಿಪಾದಿಸುತ್ತದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಭೇಟಿಯ ಸಮಯದಲ್ಲಿ, ಉಭಯ ನಾಯಕರು ಭಾರತ-ಯುರೋಪಿಯನ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದ ಮಾತುಕತೆಗಳು ಮತ್ತು ಇತರ ದ್ವಿಪಕ್ಷೀಯ ವ್ಯಾಪಾರ ವಿಷಯಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಚರ್ಚೆಗಳನ್ನು ನಡೆಸುವ ನಿರೀಕ್ಷೆಯಿದೆ. ವ್ಯಾಪಾರ ಅಡೆತಡೆಗಳ ನಡುವೆ ನಾಯಕರು ಜಾಗತಿಕ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ ಎಂದು ಸಚಿವಾಲಯ ತಿಳಿಸಿದೆ. ಮುಕ್ತ ವ್ಯಾಪಾರ ಒಪ್ಪಂದ ಮಾತುಕತೆಗಳನ್ನು ತ್ವರಿತಗೊಳಿಸಲು ಮತ್ತು ವಾಣಿಜ್ಯಿಕವಾಗಿ ಮಹತ್ವದ, ಸಮತೋಲಿತ, ಸಮಾನ, ಮಹತ್ವಾಕಾಂಕ್ಷೆಯ ಮತ್ತು ಪರಸ್ಪರ ಪ್ರಯೋಜನಕಾರಿ ಒಪ್ಪಂದವನ್ನು ಹೊಂದಲು ಈ ಸಭೆಯು ಮಹತ್ವವನ್ನು ಪಡೆದುಕೊಂಡಿದೆ. ಈ ನಡುವೆ ಸಚಿವರು ವಿಶ್ವ ವ್ಯಾಪಾರ ಸಂಸ್ಥೆಯ ಮಹಾನಿರ್ದೇಶಕ ಡಾ. ನ್ಗೋಜಿ ಒಕೊಂಜೊ-ಇವೆಲಾ ಮತ್ತು ಬೆಲ್ಜಿಯಂನ ವಿದೇಶಾಂಗ ವ್ಯವಹಾರಗಳು, ಯುರೋಪಿಯನ್ ವ್ಯವಹಾರಗಳು ಮತ್ತು ವಿದೇಶಿ ವ್ಯಾಪಾರ ಸಚಿವ ಬರ್ನಾರ್ಡ್

ಕ್ವಿಂಟಿನ್ ಅವರನ್ನು ಭೇಟಿ ಮಾಡುವ ನಿರೀಕ್ಷೆಯಿದೆ. ಸಚಿವರು ಬೆಲ್ಜಿಯಂನ ಭಾರತೀಯ ಸಮುದಾಯದ ಪ್ರತಿನಿಧಿಗಳೊಂದಿಗೆ ಸಂವಹನ ನಡೆಸಲಿದ್ದಾರೆ.

******

ದೇಶೀಯ ಬೇಡಿಕೆ ಮತ್ತೆ ಬಲಗೊಳ್ಳಲು ಪ್ರಾರಂಭಿಸಿರುವುದರಿಂದ ಭಾರತದ ಆರ್ಥಿಕ ಬೆಳವಣಿಗೆ ಚೇತರಿಸಿಕೊಳ್ಳುವ ಸಾಧ್ಯತೆಯಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಆರ್‌ಬಿಐ ಉಪ ಗವರ್ನರ್ ಮೈಕೆಲ್ ದೇಬಬ್ರತ ಪಾತ್ರ ನೇತೃತ್ವದ ತಂಡ ಬರೆದ 'ಆರ್ಥಿಕತೆಯ ಸ್ಥಿತಿ' ಲೇಖನದ ಪ್ರಕಾರ, ಗ್ರಾಮೀಣ ಬೇಡಿಕೆಯು ವೇಗವನ್ನು ಪಡೆಯುತ್ತಲೇ ಇದೆ, ಇದು ಉಜ್ವಲ ಕೃಷಿ ನಿರೀಕ್ಷೆಗಳಿಂದ ಬೆಂಬಲಿತವಾದ ಬಳಕೆಯಲ್ಲಿ ಸ್ಥಿತಿಸ್ಥಾಪಕತ್ವವನ್ನು ಪ್ರತಿಬಿಂಬಿಸುತ್ತದೆ. ಮೂಲಸೌಕರ್ಯಗಳ ಮೇಲಿನ ಸಾರ್ವಜನಿಕ ಬಂಡವಾಳದಲ್ಲಿನ ಪುನರುಜ್ಜೀವನವು ಪ್ರಮುಖ ವಲಯಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸುವ ಸಾಧ್ಯತೆಯಿದೆ. ಡಿಸೆಂಬರ್‌ನಲ್ಲಿ ಸತತ ಎರಡನೇ ತಿಂಗಳು ಮುಖ್ಯ ಹಣದುಬ್ಬರ ಕಡಿಮೆಯಾಗಿದೆ. ಎಂದು ಲೇಖನದಲ್ಲಿ ತಿಳಿಸಲಾಗಿದೆ.

******

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ಮೂಲಕ ನಾಳೆ ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್ ಕಾರ್ಯಕ್ರಮದ ೧೧೮ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಬಿತ್ತರಗೊಳ್ಳಲಿದೆ.ಅಲ್ಲದೆ ಎಐಆರ್ ನ್ಯೂಸ್, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲಿ ನೇರ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಯಲ್ಲಿ ಕಾರ್ಯಕ್ರಮವನ್ನು ಪ್ರಸಾರವಾಗಲಿದೆ.

******

ಕೌಶಲ್ಯಾಭಿವೃದ್ಧಿ, ಹಸಿರು ಇಂಧನ ಮತ್ತು ಕೈಗಾರಿಕಾ ಪಾರ್ಕ್ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಹಯೋಗಕ್ಕಾಗಿ ಒಡಿಶಾ ಸರ್ಕಾರ ಸಿಂಗಾಪುರ ಮೂಲದ ಸಂಸ್ಥೆಗಳೊಂದಿಗೆ ಎಂಟು ತಿಳುವಳಿಕಾ ಒಪ್ಪಂದಗಳಿಗೆ ಸಹಿ ಹಾಕಿದೆ. ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮತ್ತು ಸಿಂಗಾಪುರ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರ ಸಮ್ಮುಖದಲ್ಲಿ ಭುವನೇಶ್ವರದಲ್ಲಿ ನಿನ್ನೆ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು, ಇದೇ ೨೮ ಮತ್ತು ೨೯ ರಂದು ನಿಗದಿಯಾಗಿರುವ 'ಉತ್ಕರ್ಷ್ ಒಡಿಶಾ: ಮೇಕ್-ಇನ್-ಒಡಿಶಾ ಸಮಾವೇಶ'ಕ್ಕೆ ಮುಂಚಿತವಾಗಿ ಸಿಂಗಾಪುರ ಅಧ್ಯಕ್ಷರ ಭೇಟಿಯು ಮಹತ್ವದ್ದಾಗಿದೆ. ಷಣ್ಮುಗರತ್ನಂ ಅವರೊಂದಿಗೆ ಸಚಿವರು, ಸಂಸತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿದಂತೆ ಉನ್ನತ ಮಟ್ಟದ ನಿಯೋಗ ನಿನ್ನೆ ಒಡಿಶಾಗೆ ಆಗಮಿಸಿದೆ.

******

ನವದೆಹಲಿಯಲ್ಲಿ ನಿನ್ನೆ ನೀತಿ ಆಯೋಗದ ವತಿಯಿಂದ ಭಾರತೀಯ ಸಿಮೆಂಟ್ ವಲಯದಲ್ಲಿ ಇಂಗಾಲ ನಿಯಂತ್ರಣ, ಬಳಕೆ ಮತ್ತು ಸಂಗ್ರಹಣೆ-ಸಿಸಿಯುಎಸ್ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಕಾರ್ಯಾಗಾರ ೨೦೭೦ ರ ನಿವ್ವಳ-ಶೂನ್ಯ ಗುರಿಯನ್ನು ಸಾಧಿಸಲು ಮತ್ತು ಸುಸ್ಥಿರ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಭಾರತದ ನಿರಂತರ ಪ್ರಯತ್ನಗಳ ಭಾಗವಾಗಿತ್ತು. ಡಿಕಾರ್ಬೊನೈಸೇಶನ್‌ಗೆ ವಿಧಾನಗಳನ್ನು ಚರ್ಚಿಸುವುದು ಮತ್ತು ಸಿಮೆಂಟ್ ವಲಯದಲ್ಲಿನ ವಿಶಿಷ್ಟ ಸವಾಲುಗಳು ಮತ್ತು ಅವಕಾಶಗಳಿಗೆ ಪರಿಹಾರಗಳನ್ನು ರೂಪಿಸುವ ಮೂಲಕ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಭಾರತದ ಕಾರ್ಯತಂತ್ರದ ವಿಧಾನಗಳನ್ನು ಅನ್ವೇಷಿಸುವುದು ಈ ಕಾರ್ಯಾಗಾರದ ಉದ್ದೇಶವಾಗಿತ್ತು.

******

ಕುಂಭಮೇಳದಲ್ಲಿ, ಈ ತಿಂಗಳ ೨೯ರಂದು ನಡೆಯುವ ಮೌನಿ ಅಮವಾಸ್ಯೆಯ ಅಮೃತ ಸ್ನಾನಕ್ಕಾಗಿ ಸರ್ಕಾರ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ತ್ರಿವೇಣಿ ಸಂಗಮದಲ್ಲಿ ಮೌನಿ ಅಮವಾಸ್ಯೆಯಂದು ಎಂಟು ಕೋಟಿಗೂ ಹೆಚ್ಚು ಭಕ್ತರು ಮತ್ತು ಯಾತ್ರಿಕರು ಪವಿತ್ರ ಸ್ನಾನ ಮಾಡುವ ನಿರೀಕ್ಷೆಯಿದೆ. ವ್ಯವಸ್ಥೆಗಳನ್ನು ಬಲಪಡಿಸಲು, ಮುಖ್ಯ ಕಾರ್ಯದರ್ಶಿ ಮನೋಜ್ ಕುಮಾರ್ ಸಿಂಗ್ ಮತ್ತು ಡಿಜಿಪಿ ಪ್ರಶಾಂತ್ ಕುಮಾರ್ ನಿನ್ನೆ ಮಹಾಕುಂಭ ಪ್ರದೇಶಕ್ಕೆ ಭೇಟಿ ನೀಡಿ ಇಂಟಿಗ್ರೇಟೆಡ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಲ್ಲಿ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

******

ನವದೆಹಲಿಯಲ್ಲಿ ನಡೆದ ಭಾರತ್ ಮೊಬಿಲಿಟಿ ಎಕ್ಸ್‌ಪೋ ೨೦೨೫ ರಲ್ಲಿ ಘಟಕ ಪ್ರದರ್ಶನವನ್ನು ಉದ್ಘಾಟಿಸಿದ ಕೇಂದ್ರ ಸಚಿವ ಪಿಯೂಷ್ ಗೋಯಲ್, ಆಟೋ ಘಟಕ ವಲಯವು ಭಾರತೀಯ ವಾಹನ ಉದ್ಯಮದ ಹೃದಯಭಾಗವಾಗಿದೆ ಎಂದು ಹೇಳಿದರು.

ಇತರ ದೇಶಗಳು ಈ ಹಂತವನ್ನು ತಲುಪುವ ಮೊದಲು ಭಾರತ ತನ್ನದೇ ಆದ ವಿದ್ಯುತ್ ವಾಹನ ಪರಿಸರ ವ್ಯವಸ್ಥೆಯನ್ನು ನಿರ್ಮಿಸಬೇಕು ಎಂದು ಅವರು ಹೇಳಿದರು.

******

ವಿದ್ಯುತ್ ಸಚಿವ ಮನೋಹರ್ ಲಾಲ್ ಅವರು ನವದೆಹಲಿಯಲ್ಲಿ ವಿದ್ಯುತ್ ಸಚಿವಾಲಯದ ಸಂಸತ್ ಸದಸ್ಯರ ಸಮಾಲೋಚನಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ, ಅವರು ವಿಕಸಿತ ಭಾರತ್ ೨೦೪೭ ದೃಷ್ಟಿಕೋನವನ್ನು ಸಾಧಿಸುವಲ್ಲಿ ವಿದ್ಯುತ್ ವಲಯವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಒತ್ತಿ ಹೇಳಿದರು.

******

ದೆಹಲಿ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಿನ್ನೆ ಕೊನೆಗೊಂಡಿದೆ. ೭೦ ಸದಸ್ಯರ ವಿಧಾನಸಭೆಗೆ ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಸೋಮವಾರ ಉಮೇದುವಾರಿಕೆ ಹಿಂಪಡೆಯಲು ಕೊನೆಯ ದಿನಾಂಕವಾಗಿದೆ.

******

ಐಸಿಸಿ ೧೯ ವರ್ಷದೊಳಗಿನವರ ಮಹಿಳಾ ಟಿ೨೦ ವಿಶ್ವಕಪ್ ೨೦೨೫ ಮಲೇಷ್ಯಾದಲ್ಲಿಂದು ಆರಂಭವಾಗಲಿದ್ದು, ೧೫ ದಿನಗಳ ಕಾಲ, ೧೬ ತಂಡಗಳು ೪೧ ಪಂದ್ಯಗಳಲ್ಲಿ ಸ್ಪರ್ಧಿಸುತ್ತಿವೆ.

**ಈ ಕುರಿತು ಒಂದು ವರದಿ**

ಮಹಿಳಾ ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ, ಹಾಲಿ ಚಾಂಪಿಯನ್ ಭಾರತ ತಂಡ ಆತಿಥೇಯ +ಮಲೇಷ್ಯಾ, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ಜೊತೆಗೆ ಗ್ರೂಪ್ ಎ ನಲ್ಲಿ ಸ್ಥಾನ ಪಡೆದಿದೆ. ಭಾರತದ ವನಿತೆಯರು ನಾಳೆ ವೆಸ್ಟ್ ಇಂಡೀಸ್ ವಿರುದ್ಧ ತಮ್ಮ ಅಭಿಯಾನವನ್ನು ಪ್ರಾರಂಭಿಸಲಿದ್ದಾರೆ. ಆರಂಭಿಕ ದಿನವಾದ ಇಂದು ಆರು ಪಂದ್ಯಗಳು ನಡೆಯಲಿವೆ. ಗ್ರೂಪ್ ಬಿ ಪಂದ್ಯಗಳಲ್ಲಿ, ಇಂಗ್ಲೆಂಡ್-ಐರ್ಲೆಂಡ್ ಮುಖಾಮುಖಿಯಾಗಲಿದ್ದರೆ, ಜೋಹೋರ್‌ನಲ್ಲಿ ಪಾಕಿಸ್ತಾನ ಅಮೆರಿಕಾ ತಂಡದ ವಿರುದ್ಧ ಸೆಣಸಲಿದೆ. ಸರವಾಕ್‌ನಲ್ಲಿ ನಡೆಯುವ ಗ್ರೂಪ್ ಸಿ ಪಂದ್ಯಗಳಲ್ಲಿ ಸಮೋವಾ-ನೈಜೀರಿಯಾ ಮತ್ತು ನ್ಯೂಜಿಲೆಂಡ್-ದಕ್ಷಿಣ ಆಫ್ರಿಕಾ ನಡುವೆ ಪಂದ್ಯಗಳು ಇಂದು ನಿಗದಿಯಾಗಿವೆ. ಏತನ್ಮಧ್ಯೆ, ಸೆಲಂಗೋರ್‌ನಲ್ಲಿ ನಡೆಯುವ ಗ್ರೂಪ್ ಡಿ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಸ್ಕಾಟ್ಲೆಂಡ್ ವಿರುದ್ಧ ಸೆಣಸಿದರೆ, ಬಾಂಗ್ಲಾದೇಶ ನೇಪಾಳ ವಿರುದ್ಧ ಅಭಿಯಾನ ಆರಂಭಿಸಲಿದೆ. ಪ್ರತಿ ಗುಂಪಿನಿಂದ ಅಗ್ರ ಮೂರು ತಂಡಗಳು ಸೂಪರ್ ಸಿಕ್ಸ್ ಹಂತಕ್ಕೆ ಮುನ್ನಡೆಯುತ್ತವೆ, ಆರು ತಂಡಗಳ ಎರಡು ಗುಂಪು ರಚನೆಯಾಗುತ್ತವೆ. ಈ ಹಂತದಲ್ಲಿ, ತಂಡಗಳು ಮೊದಲ ಸುತ್ತಿನಲ್ಲಿ ಅವರು ಎದುರಿಸದ ತಂಡವನ್ನು ಎದುರಿಸಲಿವೆ. ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ಜನವರಿ ೩೧ ರಂದು ನಿಗದಿಯಾಗಿರುವ ಸೆಮಿಫೈನಲ್‌ಗೆ ಮುನ್ನಡೆಯುತ್ತವೆ.

******

ಇಂಡಿಯಾ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ಭಾರತದ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಪುರುಷರ ಡಬಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದಾರೆ. ನಿನ್ನೆ ರಾತ್ರಿ ನವದೆಹಲಿಯ ಕೆ. ಡಿ. ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಅವರು ದಕ್ಷಿಣ ಕೊರಿಯಾದ ಜೋಡಿ ಜಿನ್ ಯೋಂಗ್ ಮತ್ತು ಕಾಂಗ್ ಮಿನ್-ಹ್ಯುಕ್ ಅವರನ್ನು ೨೧-೧೦, ೨೧-೧೭ ಸೆಟ್‌ಗಳಿಂದ ಸೋಲಿಸಿದರು.

***END***